## ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ. 734/2023

| | | |
|---|---|---|
| ಹೆಸರು | ಮಹೇಶ | PW -3 |
| ತಂದೆಯ ಹೆಸರು | ಗುಡ್ಡಪ್ಪ | CW -6 |
| ವಯಸ್ಸು | 34 ವರ್ಷ | |
| ಉದ್ಯೋಗ | ಕೂಲಿ | ದಿನಾಂಕಃ 06.02.2025 |
| ವಾಸ | ಗಂಗನರಸಿ ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1 ಮತ್ತು 7 ರವರ ಪರಿಚಯ ಇದೆ. ಮೃತ ಬಸವರಾಜ ಚಾಸಾ 1 ರವರ ಗಂಡ.

ದಿನಾಂಕ 06.05.2023 ರಂದು ನಾನು ಮತ್ತು ಚಾಸಾ 7 ರವರ ಕೆಲಸದ ನಿಮಿತ್ತ ಹರಿಹರಕ್ಕೆ ಬಂದು, ಕೆಲಸ ಮುಗಿಸಿ ಮರಳಿ ಗಂಗನರಸಿಗೆ ನನ್ನ ಬಾಬ್ತು ಕೆ ಎ 17 ಇ ವೈ 4594 ಟಿ ವಿ ಎಸ್ ಬೈಕಿನಲ್ಲಿ ನಾನು ಮತ್ತು ಚಾಸಾ 7 ರವರು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಹರಿಹರದ ಕಡೆಯಿಂದ ಹರಪನಹಳ್ಳಿ ಕಡೆಗೆ ಹೋಗುತ್ತಿದ್ದಾಗ, ನಮ್ಮ ಮುಂದುಗಡೆ ಮೃತ ಬಸವರಾಜ ರವರು ತಮ್ಮ ಬೈಕನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದು, ಆಗ ನಮ್ಮ ಹಿಂದಿನಿಂದ ಒಂದು ಲಾರಿಯು ಬಂದು ನಾವು ಹೋಗುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿ ನಂತರ ನಮ್ಮ ಮುಂದೆ ಹೋಗುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತಾನೆ. ಸದರಿ ಅಪಘಾತದಲ್ಲಿ ನನಗೆ ತಲೆಗೆ, ಎಡಗೈ, ಎಡಗಾಲು ಗಳಿಗೆ ಪೆಟ್ಟು ಬಿದ್ದಿರುತ್ತದೆ. ಚಾಸಾ 7 ರವರಿಗೆ ತಲೆಗೆ, ಎಡಗೈ ಮತ್ತು ಸೊಂಟಕ್ಕೆ ಪೆಟ್ಟು ಬಿದ್ದಿರುತ್ತದೆ. ನಂತರ ಲಾರಿಯು ನಮ್ಮ ಮುಂದೆ ಹೋಗುತ್ತಿದ ಬೈಕಿನ ಸವಾರನ ಮೇಲೆ ಲಾರಿಯು ಪಲ್ಟಿಯಾಗಿ ಬಿದ್ದಿದ್ದು, ಬಸವರಾಜರವರಿಗೆ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿತ್ತಾನೆ. ಸದರಿ ಲಾರಿಯು ಅತೀವೇಗವಾಗಿ ಮತ್ತು ನಿರ್ಲಕ್ಷತನದಿಂದ ಬಂದಿದ್ದು, ನಾವು ರಸ್ತೆಯ ಎಡಭಾಗದಲ್ಲಿ ಇದ್ದರೂ ಸಹ ನಮಗೆ ಡಿಕ್ಕಿ ಪಡಿಸಿ ನಮ್ಮ ಮುಂದೆ 50 ಅಡಿ ದೂರದಲ್ಲಿ ಹೋಗುತ್ತಿದ್ದ ಬಸವರಾಜ ರವರ ಬೈಕಿಗೆ ಡಿಕ್ಕಿ ಪಡಿಸಿ ಉಜ್ಜಿಕೊಂಡು ಹೋಗಿ ಲಾರಿಯು ಆತನ ಮೇಲೆ ಬಿದ್ದಿರುತ್ತದೆ. ನಂತರ ಅಲ್ಲಿಯೇ ಇದ್ದ ಸ್ಥಳೀಕರು ನಮ್ಮನ್ನು ಉಪಚರಿಸಿ, ಹರಿಹರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ನಂಜಪ್ಪ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಲಾರಿಯ ನಂಬರ ಕೆ ಎ 17 ಎಎ 2404 ಇದ್ದು ಅದು ತಾಳೆ ಹಣ್ಣಿನ ಗೊನೆಗಳನ್ನು ತುಂಬಿಕೊಂಡು ಬರುತ್ತಿತ್ತು. ಸದರಿ ಅಪಘಾತವಾದ ನಂತರ ಲಾರಿ ಚಾಲಕನು ಲಾರಿಯನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ಸದರಿ ಬಸವರಾಜ ರವರು ಚಾಲನೆ ಮಾಡುತ್ತಿದ್ದ ಬೈಕ್ ನಂಬರ ಕೆ ಎ 17 ಇ ಬಿ 5954 ಆಗಿತ್ತು. ನಂತರ ಮೃತ ಬಸವರಾಜರವರ ಹೆಂಡತಿ ಚಾಸಾ 1 ರವರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವ ಬಗ್ಗೆ ತಿಳಿದು ಬಂದಿರುತ್ತದೆ. ನಂತರ ಅಪಘಾತ ಪಡಿಸಿದ ಲಾರಿಯ ಚಾಲಕನ ಹೆಸರು ಮಂಜಪ್ಪ ಎಂದು ಪೊಲೀಸರು ಹೇಳಿರುತ್ತಾರೆ. ನಾನು ಸದರಿ

ವಿಚಾರವಾರಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಾಸಾ 1 ರಿಂದ 5 ಮತ್ತು 7 ರವರು ಹಾಗೂ ಮೃತ ಬಸವರಾಜನು ಸಹ ನನಗೆ ಆತ್ಮೀಯರು ಎಂದರೆ ಸರಿ. ಅಪಘಾತವಾದ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಗುತ್ತೂರು ಗ್ರಾಮದಿಂದ ಕೆ ಇ ಬಿ ಗ್ರಿಡ್ ದಾಟಿ ಮಂತ್ರಪ್ಪಹಳ್ಳದ ತೂರು ಸೇತುವೆ ವರೆಗೂ ರಸ್ತೆ ವಿಶಾಲವಾಗಿದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಎರಡು ಭಾರೀ ಗಾತ್ರದ ವಾಹನಗಳು ಮುಖಾಮುಖಿಯಾಗಿ ಸಾಗುತ್ತವೆ ಎಂದರೆ ಸರಿ. ಸದರಿ ರಸ್ತೆಯ ಎರಡು ಬದಿಗೂ ಸುಮಾರು 5–6 ಅಡಿ ಕಚ್ಚಾ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಗೆ ಹೊಂದಿಕೊಂಡು ಸಾಕಷ್ಟು ಇಟ್ಟಿಗೆ ಬಟ್ಟಿಗಳು ಇವೆ ಮತ್ತು ಅಲ್ಲಿ ಸಾಕಷ್ಟು ಜನರ ಸಂಚಾರ ಇರುತ್ತದೆ ಎಂದರೆ ಸರಿ. ಕೆ ಇ ಬಿ ಗ್ರಿಡ್ ಹತ್ತಿರ ರಸ್ತೆಯಲ್ಲಿ ದೊಡ್ಡ ತಿರುವು ಇದೆ ಎಂದರೆ ಸಾಕ್ಷಿಯು ತಿರುವು ಚಿಕ್ಕದಿದ್ದು ರಸ್ತೆಯೂ ಚಿಕ್ಕದಿದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯಲ್ಲಿ ತಿರುವಿನ ಪಕ್ಕಕ್ಕೆ ಕಚ್ಚಾ ರಸ್ತೆ ಇದ್ದು, ಅದರ ಪಕ್ಕಕ್ಕೆ ಚರಂಡಿ ಇದ್ದು, ಅದರ ನಂತರ ಜಾಲಿ ಗಿಡಗಳು ಬೆಳೆದಿವೆ ಎಂದರೆ ಸರಿ. ಸದರಿ ರಸ್ತೆಯು 20 ಅಡಿ ಅಗಲ ಇದ್ದು, 5 ಅಡಿ ಕಚ್ಚಾ ರಸ್ತೆ ಇದೆ, ನಂತರ 3 ಅಡಿ ಚರಂಡಿ ಇದೆ ಎಂದರೆ ಸರಿ.

ಸದರಿ ರಸ್ತೆಯ ತಿರುವಿನಲ್ಲಿ ಎದುರಿಗೆ ಬರುತ್ತಿರುವ ವಾಹನವು ಹತ್ತಿರದಲ್ಲಿ ಇದ್ದರೆ ಮಾತ್ರ ಕಾಣುತ್ತದೆ ದೂರದಿಂದ ಕಾಣುವುದಿಲ್ಲ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹಗಳ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳದಿಂದ ಹರಿಹರಕ್ಕೆ ಬರಲು ಹರಿಹರ ಗ್ರಾಮಾಂತರ ಠಾಣೆಯ ಮುಂದೆ ಬರಬೇಕು ಎಂದರೆ ಸರಿ. ಹರಿಹರದ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಾದರೆ, ಹರಿಹರ ವೃತ್ತ ಮತ್ತು ನಗರ ಠಾಣೆಯ ಮುಂದೆ ಹಾದು ಹೋಗಬೇಕು ಎಂದರೆ ಸರಿ. ಸದರಿ ಅಪಘಾತದ ಬಗ್ಗೆ ನನ್ನನ್ನು ನೋಡಲು ಬಂದ ಸಂಬಂಧಿಕರಿಗೆ ಹೇಳಿ ದೂರು ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆಸ್ಪತ್ರೆಗೆ ದಾಖಲಾದ ನಂತರ ನನಗೆ ದೂರನ್ನು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಐದು ದಿನಗಳ ಕಾಲ ಪ್ರಜ್ಞೆ ತಪ್ಪಿದ್ದರಿಂದ ದೂರಕೊಡಲು ಸಾಧ್ಯವಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರಾವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಚಾಸಾ 1 ರವರು ದೂರು ದಾಖಲಿಸಿದ ಬಗ್ಗೆ ಆರು ದಿನಗಳ ನಂತರ ತಿಳಿದುಬಂದಿರುತ್ತದೆ. ನನಗೆ ರಕ್ತಸ್ರಾವ ಆಗಿದ್ದರಿಂದ ಪ್ರಜ್ಞೆ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ಲಾರಿ ಚಾಲಕನ ಮುಖವನ್ನು ನೋಡಿರುತ್ತೇನೆ. ಸಾಕ್ಷಿಯು ಮುಂದುವರೆ ಆತನು ನಮ್ಮನ್ನು ನೋಡಿ ಓಡಿ ಹೋಗುತ್ತಿದ್ದಾಗ ನಾನು ಅವರ ಮುಖವನ್ನು ನೋಡಿರುತ್ತೇನೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಆರೋಪಿಯ ಮುಖ ನೋಡಿರುವುದಿಲ್ಲ, ಪೊಲೀಸ ಠಾಣೆಯಲ್ಲಿಯೇ ನೋಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಲಾರಿಯು ಸಂಪೂರ್ಣ ಲೋಡ ಮಾಡಿಕೊಂಡು ಬರುತ್ತಿತ್ತು ಎಂದರೆ ಸರಿ. ಆದ್ದರಿಂದ ಲೋಡ್ ಹೇರಿಕೊಂಡಾಗ ಲಾರಿಯು ನಿಧಾನವಾಗಿ ಚಲಿಸುತ್ತದೆ ಎಂದರೆ ಸರಿಯಲ್ಲ.

ನನಗೆ ಲಾರಿ ಚಾಲಕನು ವೇಗವಾಗಿ ಬರುತ್ತಿದ್ದನು ಎಂದು ತಿಳಿದ ಮೇಲೆ ನನ್ನ ಬೈಕನ್ನು ಕಚ್ಚಾ ರಸ್ತೆಯ ಮೇಲೆ ಚಾಲನೆ ಮಾಡಿಕೊಂಡು ಹೋಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಸಂಪೂರ್ಣ ಎಡಭಾಗದಲ್ಲಿ ಇದ್ದರೂ ಸಹ ಲಾರಿ ಚಾಲಕ ಬಂದು ನಮ್ಮ ಬೈಕಿಗೆ ಡಿಕ್ಕಿ ಪಡಿಸಿರುತ್ತಾನೆ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ಸಾಕ್ಷ್್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಮತ್ತು ಬಸವರಾಜ ಅಕ್ಕಪಕ್ಕ ಮಾತನಾಡುತ್ತಾ ಬೈಕುಗಳನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಆ ದಿನ ಲಾರಿ ಚಾಲಕನು ಹಿಂದೆಯಿಂದ ಹಾರನ್ ಮಾಡಿದಾಗ ಬಸವರಾಜನು ಗಾಬರಿಗೊಂಡು ತನ್ನ ಬೈಕನ್ನು ರಸ್ತೆಯ ಬಲಭಾಗಕ್ಕೆ ಬಂದಿರುತ್ತಾನೆ ಎಂದರೆ ಸರಿಯಲ್ಲ. ಆದ್ದರಿಂದ ಲಾರಿ ಚಾಲಕನು ತನ್ನ ಲಾರಿಯನ್ನು ಸಂಪೂರ್ಣವಾಗಿ ಬಲಭಾಗಕ್ಕೆ ಬಂದಿದ್ದು, ರಸ್ತೆಯಲ್ಲಿ ತಿವಿರು ಇದ್ದುದ್ದರಿಂದ ಲಾರಿಯು ಪಲ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ. ಲಾರಿ ಚಾಲಕನು ಅಪಘಾತವನ್ನು ತಪ್ಪಿಸಲು ಪ್ರಯತ್ನಿಸಿದ್ದು, ನಮ್ಮ ನಿರ್ಲಕ್ಷತನದಿಂದ ಅಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಲಾರಿಯು 50 ಅಡಿ ಉಜ್ಜಿಕೊಂಡು ಹೋಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾವು ಎಡಭಾಗಕ್ಕೆ ಬೈಕ್ ನ್ನು ಚಾಲಾಯಿಸಿಕೊಂಡು ಹೋಗುತ್ತಿದ್ದು, ಲಾರಿ ಚಾಲಕನು ಅತೀವೇಗದಿಂದ ಲಾರಿ ಚಾಲನೆ ಮಾಡಿಕೊಂಡು ಬಂದನ್ನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಹರಿಹರ.